

ದೂರವಿರುವ ಕೋಲ್ಕೊತ್ತಕ್ಕೆ ಹೋಗಿದ್ದೇನೆ. ಕಾಶಿಗೂ ಹೋಗಿದ್ದೇನೆ. ಇತ್ತೀಚೆಗಷ್ಟೇ ಡೆಲ್ಲಿಗೆ ಹೋಗಿ ಬಂದೆ. ಒಂದೊಂದು ಪ್ರಯಾಣವೂ ಅದ್ಭುತ ಅನುಭವವೇ. ಭಾಷೆ, ಧರ್ಮವನ್ನು ಮೀರಿ ರೈಲಿನ ಸಹಪ್ರಯಾಣಿಕರು ನಮ್ಮ ಸ್ನೇಹಿತರಾಗುವುದೂ ಇದೆ. ಇಂತಹದೊಂದು ಸೌಹಾರ್ದ ಸಂಬಂಧ ರೈಲು ಪ್ರಯಾಣದಲ್ಲಿ ಮಾತ್ರ ಸಾಧ್ಯ ಎಂದು ನನ್ನ ಅನಿಸಿಕೆ. ಕಾಶಿಯ ರೈಲು ಪಯಣ ನನಗೆ ಅಂತಹದೊಂದು ಸ್ನೇಹಿತರನ್ನು ಒದಗಿಸಿ ಕೊಟ್ಟಿದೆ. ನಾನು, ತಾಯಿ ಮೈಸೂರು ಮೂಲಕ ಕಾಶಿಗೆ ಹೋದದ್ದು. ನಮ್ಮ ಕಂಪಾರ್ಟ್‌ಮೆಂಟಲ್ಲಿ ಮೈಸೂರಿನಲ್ಲಿ ವಾಸವಿರುವ ಸಿಖ್ ಸಮುದಾಯಕ್ಕೆ ಸೇರಿದ, ಹಿಂದಿ ಮಾತಾಡುವ ದಂಪತಿಗಳು ಇದ್ದರು. ಮೊದಲ ದಿನವೇ ನಾವು ಆಪ್ತರಾದೆವು. ಅವರು ಚಪಾತಿ, ಪಲಾವು, ಮಂಡಕ್ಕಿಯನ್ನು ನಮಗೆ ಕೊಟ್ಟರು. ನಾವು ಬಾಳೆಹಣ್ಣು ಹಲ್ವ, ರಾಗಿ ಲಡ್ಡು, ಅವಲಕ್ಕಿಯನ್ನು ಅವರಿಗೆ ಕೊಟ್ಟೆವು. ಅವರೂ ಕಾಶಿಗೆ ಹೋಗುವವರು. ಆದರೆ ಅವರು ಒಂದು ತಂಡದ ಜೊತೆ ಬಂದಿದ್ದರು. ಕಾಶಿಯಲ್ಲಿ ಪರಸ್ಪರ ಬೀಳ್ಕೊಡುವಾಗ ನಾವು ಭಾವುಕರಾಗಿದ್ದೆವು. ಅಲ್ಲಿಗೇ ನಮ್ಮ ಗೆಳೆತನ ಮುಗಿಯಲಿಲ್ಲ.

ಅವರ ಆಮಂತ್ರಣದ ಮೇರೆಗೆ ಊರಿಗೆ ಬಂದ ಮೇಲೆ ನಾನು ಗಂಡನ ಜೊತೆ ಮೈಸೂರಿನ ಅವರ ಮನೆಗೆ ಹೋದದ್ದು ಮಾತ್ರವಲ್ಲ ಒಂದು ದಿನ ಉಳಿದೆ. ಅವರೂ ನಮ್ಮ ಮನೆಗೆ ಬಂದಿದ್ದಾರೆ. ಕಾಶಿಗೆ ಹೋಗಿ ಎರಡು ವರ್ಷವೇ ಕಳೆದು ಹೋದರೂ ಈಗಲೂ ಆ ದಂಪತಿಗಳು ಫೋನ್ ಸಂಪರ್ಕದಲ್ಲಿದ್ದಾರೆ. ಕಷ್ಟಸುಖ ವಿಚಾರಿಸುತ್ತಾರೆ.